# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 1272 |
| ಉತ್ತರಿಸಬೇಕಾದ ದಿನಾಂಕ | : 19.12.2024 |
| ಸದಸ್ಯರ ಹೆಸರು | :ಶ್ರೀಮತಿ ಬಲ್ಕೀಸ್ ಭಾನು (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | : ಮಾನ್ಯ ಮುಖ್ಯಮಂತ್ರಿಯವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿರುವ ಒಟ್ಟು ಸರ್ಕಾರಿ ಕ್ರೀಡಾ ಶಾಲೆಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | ರಾಜ್ಯದಾದ್ಯಂತ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಅಧೀನದಲ್ಲಿ ಒಟ್ಟು 32 ಕ್ರೀಡಾ ವಸತಿ ನಿಲಯಗಳು ಹಾಗೂ 02 ಕ್ರೀಡಾ ವಸತಿ ಶಾಲೆಗಳು ಕಾರ್ಯ ನಿರ್ವಹಿಸುತ್ತಿದ್ದು, ವಿವರಗಳನ್ನು **ಅನುಬಂಧ-1**ರಲ್ಲಿ ಒದಗಿಸಿದೆ. |
| ಆ | ವಿದ್ಯಾರ್ಥಿಗಳಲ್ಲಿ ಕ್ರೀಡೆಯನ್ನು ಪ್ರೋತ್ಸಾಹಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು; (ವಿವರ ನೀಡುವುದು) | ರಾಜ್ಯದ ವಿದ್ಯಾರ್ಥಿಗಳಲ್ಲಿ ಕ್ರೀಡೆಯನ್ನು ಪ್ರೋತ್ಸಾಹಿಸಲು ಸರ್ಕಾರವು ಅನುಷ್ಠಾನಗೊಳಿಸುತ್ತಿರುವ ಕಾರ್ಯಕ್ರಮಗಳ ವಿವರಗಳನ್ನು **ಅನುಬಂಧ-2** ರಲ್ಲಿ ಒದಗಿಸಿದೆ. |
| ಇ | ವಿದ್ಯಾರ್ಥಿಗಳಲ್ಲಿ ಕ್ರೀಡೆಗಳನ್ನು ಪ್ರೋತ್ಸಾಹಿಸಲು ಯಾವುದಾದರೂ ನೂತನ ಯೋಜನೆಗಳ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ? (ವಿವರ ನೀಡುವುದು) | ವಿದ್ಯಾರ್ಥಿಗಳಲ್ಲಿ ಕ್ರೀಡೆಯನ್ನು ಪ್ರೋತ್ಸಾಹಿಸಲು ಈ ಕೆಳಕಂಡ ನೂತನ ಯೋಜನೆಗಳನ್ನು ರೂಪಿಸಲಾಗಿದೆ:<br>1. ಕರ್ನಾಟಕದ ಕ್ರೀಡಾಪಟುಗಳು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ಕ್ರೀಡಾಕೂಟಗಳಲ್ಲಿ ಭಾಗವಹಿಸುವ ಸಮಯದಲ್ಲಿ ಗಾಯಗೊಂಡಲ್ಲಿ ಅವರ ಚಿಕಿತ್ಸೆಗೆ ನೆರವಾಗಲು ಆರೋಗ್ಯ ವಿಮೆ ಸೌಲಭ್ಯವನ್ನು ಒದಗಿಸಲು ಉದ್ದೇಶಿಸಲಾಗಿದ್ದು, ಪ್ರಸಕ್ತ ಸಾಲಿನಲ್ಲಿ ರೂ.1.00 ಕೋಟಿ ವೆಚ್ಚವನ್ನು ಒದಗಿಸಲಾಗಿದೆ.<br>2. ಎಲ್ಲಾ ಇಲಾಖೆಗಳ ನೇಮಕಾತಿಯಲ್ಲಿ ಶೇ.2% ಹುದ್ದೆಗಳನ್ನು ಕ್ರೀಡಾಪಟುಗಳಿಗೆ ಮೀಸಲಿಡಲು ಕ್ರಮವಹಿಸಲಾಗುತ್ತಿದೆ.<br>3. ಸೈಕ್ಲಿಂಗ್ ಕ್ರೀಡೆಯನ್ನು ಉತ್ತೇಜಿಸಲು ಮೈಸೂರಿನಲ್ಲಿ ರೂ.10 ಕೋಟಿ ವೆಚ್ಚದಲ್ಲಿ ಸೈಕ್ಲಿಂಗ್ ವೆಲೋಡ್ರೋಂ ನಿರ್ಮಾಣ ಮಾಡಲು ಕ್ರಮವಹಿಸಲಾಗುತ್ತಿದೆ.<br><br>ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ಕ್ರೀಡಾಕೂಟಗಳಲ್ಲಿ ಭಾಗವಹಿಸಿ ವಿಜೇತರಾದ ಕ್ರೀಡಾಪಟುಗಳಿಗೆ ನೀಡುವ ನಗದು ಪುರಸ್ಕಾರ ಮೊತ್ತವನ್ನು ಪ್ರಸಕ್ತ ಸಾಲಿನಿಂದ ಹೆಚ್ಚಿಸಲು ಉದ್ದೇಶಿಸಲಾಗಿದ್ದು, 2024-25 ನೇ ಆರ್ಥಿಕ ಸಾಲಿನಲ್ಲಿ ಒಟ್ಟಾರೆ ರೂ.500.00 ಲಕ್ಷಗಳನ್ನು ಒದಗಿಸಲಾಗಿದೆ. |
| ಈ | ಶಿವಮೊಗ್ಗ ಜಿಲ್ಲೆಯ ವ್ಯಾಪ್ತಿಯಲ್ಲಿ ಹೊಸದಾಗಿ ಸರ್ಕಾರಿ ಕ್ರೀಡಾ ವಸತಿ ಶಾಲೆಗಳನ್ನು ಪ್ರಾರಂಭಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ; | ಶಿವಮೊಗ್ಗದ ನೆಹರು ಜಿಲ್ಲಾ ಕ್ರೀಡಾಂಗಣದ ಆವರಣದಲ್ಲಿ ಜಿಲ್ಲಾ ಕ್ರೀಡಾ ವಸತಿ ನಿಲಯ ಕಾರ್ಯ ನಿರ್ವಹಿಸುತ್ತಿದೆ.<br><br>ಈ ಹಿನ್ನೆಲೆಯಲ್ಲಿ ಹೊಸದಾಗಿ ಸರ್ಕಾರಿ ಕ್ರೀಡಾ ವಸತಿ ಶಾಲೆ ಪ್ರಾರಂಭಿಸುವ ಕುರಿತು ಯಾವುದೇ ಪ್ರಸ್ತಾವನೆ ಪ್ರಸ್ತುತ ಸರ್ಕಾರದ ಮುಂದಿರುವುದಿಲ್ಲ. |

| | | |
|---|---|---|
| ಉ | ಇದ್ದಲ್ಲಿ, ಸರ್ಕಾರ ಯಾವ ಕ್ರಮ ಕೈಗೊಂಡಿದೆ? (ವಿವರ ನೀಡುವುದು) | ಮೇಲಿನ ಉತ್ತರದ ಹಿನ್ನೆಲೆಯಲ್ಲಿ ಅನ್ವಯಿಸುವುದಿಲ್ಲ. |

**ಸಂಖ್ಯೆ:ವೈಎಸ್‌ಡಿ-ಇಬಿಬಿ/127/2024**

(ಸಿದ್ದರಾಮಯ್ಯ)
ಮುಖ್ಯಮಂತ್ರಿ

## ಅನುಬಂಧ-1

## ರಾಜ್ಯದಲ್ಲಿರುವ ಕ್ರೀಡಾ ವಸತಿಶಾಲೆ/ನಿಲಯಗಳ ವಿವರ

| ಕ್ರಸ | ಜಿಲ್ಲೆ | ಕ್ರೀಡಾಶಾಲೆ/ವಸತಿನಿಲಯ |
|---|---|---|
| 1 | ಬೆಂಗಳೂರುನಗರಜಿಲ್ಲೆ | ಕ್ರೀಡಾವಸತಿನಿಲಯ, ಶ್ರೀಕಂಠೀರವಕ್ರೀಡಾಂಗಣ |
| 2 | ಬೆಂಗಳೂರುಉತ್ತರ | ಕ್ರೀಡಾವಸತಿಶಾಲೆ, ಶ್ರೀಜಯಪ್ರಕಾಶ್ ನಾರಾಯಣ ರಾಷ್ಟ್ರೀಯ ಯುವಜನ ತರಬೇತಿ ಕೇಂದ್ರ, ವಿದ್ಯಾನಗರ |
| 3 | ಮೈಸೂರುಜಿಲ್ಲೆ | ಕ್ರೀಡಾವಸತಿನಿಲಯ, ಮೈಸೂರು |
| 4 | ಕೊಡಗುಜಿಲ್ಲೆ | ಕ್ರೀಡಾ ವಸತಿ ಶಾಲೆ, ಕೂಡಿಗೆ |
| 5 | ಕೊಡಗುಜಿಲ್ಲೆ | ಕ್ರೀಡಾ ವಸತಿ ನಿಲಯ, ಮಡಿಕೇರಿ |
| 6 | ಕೊಡಗುಜಿಲ್ಲೆ | ಕ್ರೀಡಾ ವಸತಿನಿಲಯ, ಪೊನ್ನಂಪೇಟೆ |
| 7 | ಬೆಳಗಾವಿಜಿಲ್ಲೆ | ಕ್ರೀಡಾ ವಸತಿನಿಲಯ, ಬೆಳಗಾವಿ |
| 8 | ದಾವಣಗೆರೆಜಿಲ್ಲೆ | ಕ್ರೀಡಾ ವಸತಿ ನಿಲಯ, ದಾವಣಗೆರೆ |
| 9 | ಚಿಕ್ಕಮಗಳೂರುಜಿಲ್ಲೆ | ಕ್ರೀಡಾ ವಸತಿ ನಿಲಯ, ಚಿಕ್ಕಮಗಳೂರು |
| 10 | ಹಾವೇರಿಜಿಲ್ಲೆ | ಕ್ರೀಡಾ ವಸತಿ ನಿಲಯ, ಹಾವೇರಿ |
| 11 | ಮಂಡ್ಯಜಿಲ್ಲೆ | ಕ್ರೀಡಾ ವಸತಿ ನಿಲಯ, ಮಂಡ್ಯ |
| 12 | ದಕ್ಷಿಣಕನ್ನಡಜಿಲ್ಲೆ | ಕ್ರೀಡಾ ವಸತಿ ನಿಲಯ, ಮಂಗಳೂರು |
| 13 | ರಾಮನಗರಜಿಲ್ಲೆ | ಕ್ರೀಡಾ ವಸತಿ ನಿಲಯ, ರಾಮನಗರ |
| 14 | ಶಿವಮೊಗ್ಗಜಿಲ್ಲೆ | ಕ್ರೀಡಾ ವಸತಿ ನಿಲಯ, ಶಿವಮೊಗ್ಗ |
| 15 | ಚಿತ್ರದುರ್ಗಜಿಲ್ಲೆ | ಕ್ರೀಡಾ ವಸತಿ ನಿಲಯ, ಚಿತ್ರದುರ್ಗ |
| 16 | ಉಡುಪಿಜಿಲ್ಲೆ | ಕ್ರೀಡಾ ವಸತಿ ನಿಲಯ, ಉಡುಪಿ |
| 17 | ಧಾರವಾಡಜಿಲ್ಲೆ | ಕ್ರೀಡಾ ವಸತಿ ನಿಲಯ, ಧಾರವಾಡ |
| 18 | ಕಲಬುರ್ಗಿಜಿಲ್ಲೆ | ಕ್ರೀಡಾ ವಸತಿ ನಿಲಯ, ಕಲಬುರ್ಗಿ |
| 19 | ಬಳ್ಳಾರಿಜಿಲ್ಲೆ | ಕ್ರೀಡಾ ವಸತಿ ನಿಲಯ, ಬಳ್ಳಾರಿ |
| 20 | ಕೊಪ್ಪಳಜಿಲ್ಲೆ | ಕ್ರೀಡಾ ವಸತಿ ನಿಲಯ, ಕೊಪ್ಪಳ |
| 21 | ರಾಯಚೂರುಜಿಲ್ಲೆ | ಕ್ರೀಡಾ ವಸತಿ ನಿಲಯ, ರಾಯಚೂರು |
| 22 | ಹಾಸನಜಿಲ್ಲೆ | ಕ್ರೀಡಾ ವಸತಿ ನಿಲಯ, ಹಾಸನ |

| | | |
|---|---|---|
| 23 | ಚಿಕ್ಕಬಳ್ಳಾಪುರಜಿಲ್ಲೆ | ಕ್ರೀಡಾ ವಸತಿ ನಿಲಯ, ಚಿಕ್ಕಬಳ್ಳಾಪುರ |
| 24 | ಬಾಗಲಕೋಟೆಜಿಲ್ಲೆ | ಕ್ರೀಡಾ ವಸತಿ ನಿಲಯ, ಬಾಗಲಕೋಟೆ |
| 25 | ಉತ್ತರಕನ್ನಡಜಿಲ್ಲೆ | ಕ್ರೀಡಾ ವಸತಿ ನಿಲಯ, ಕಾರವಾರ |
| 26 | ಉತ್ತರಕನ್ನಡಜಿಲ್ಲೆ | ಕ್ರೀಡಾ ವಸತಿ ನಿಲಯ, ಹಳಿಯಾಳ |
| 27 | ಚಾಮರಾಜನಗರಜಿಲ್ಲೆ | ಕ್ರೀಡಾ ವಸತಿ ನಿಲಯ, ಚಾಮರಾಜನಗರ |
| 28 | ಚಾಮರಾಜನಗರಜಿಲ್ಲೆ | ಕ್ರೀಡಾ ವಸತಿ ನಿಲಯ, ಸಂತೇಮಾರಹಳ್ಳಿ, |
| 29 | ಕೋಲಾರಜಿಲ್ಲೆ | ಕ್ರೀಡಾ ವಸತಿ ನಿಲಯ, ಕೋಲಾರ |
| 30 | ಬೀದರ್ಜಿಲ್ಲೆ | ಕ್ರೀಡಾ ವಸತಿ ನಿಲಯ, ಬೀದರ್ |
| 31 | ತುಮಕೂರುಜಿಲ್ಲೆ | ಕ್ರೀಡಾ ವಸತಿ ನಿಲಯ, ತುಮಕೂರು |
| 32 | ಯಾದಗಿರಿಜಿಲ್ಲೆ | ಕ್ರೀಡಾ ವಸತಿ ನಿಲಯ, ಯಾದಗಿರಿ |
| 33 | ವಿಜಯಪುರಜಿಲ್ಲೆ | ಕ್ರೀಡಾ ವಸತಿ ನಿಲಯ, ವಿಜಯಪುರ |
| 34 | ಗದಗಜಿಲ್ಲೆ | ಕ್ರೀಡಾ ವಸತಿ ನಿಲಯ, ಗದಗ |

<u>ಅನುಬಂಧ-02</u>

## <u>ವಿದ್ಯಾರ್ಥಿಗಳಲ್ಲಿ ಕ್ರೀಡೆಯನ್ನು ಪ್ರೋತ್ಸಾಹಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳ ವಿವರ ಕೆಳಕಂಡಂತಿದೆ.</u>

- **<u>ಕ್ರೀಡಾ ವಸತಿ ನಿಲಯಗಳು</u>:**

ಒಟ್ಟು 32 ಕ್ರೀಡಾ ವಸತಿ ನಿಲಯಗಳು ಹಾಗೂ 02 ಕ್ರೀಡಾ ಶಾಲೆಗಳು ಕಾರ್ಯನಿರ್ವಹಿಸುತ್ತಿದ್ದು, 2024-25ನೇ ಸಾಲಿನಲ್ಲಿ 2628 ಕ್ರೀಡಾಪಟುಗಳಿಗೆ ಪ್ರವೇಶ ನೀಡಲಾಗಿದೆ. ಪ್ರವೇಶ ಪಡೆದ ಕ್ರೀಡಾಪಟುಗಳಿಗೆ ಉಚಿತ ವಸತಿ, ಊಟೋಪಹಾರ, ಕ್ರೀಡಾ ತರಬೇತಿ, ಕ್ರೀಡಾಕೂಟಗಳಲ್ಲಿ ಭಾಗವಹಿಸಲು ಪ್ರಯಾಣ ಭತ್ಯೆ/ದಿನ ಭತ್ಯೆ, ಕ್ರೀಡಾ ಸಮವಸ್ತ್ರ, ಉಚಿತ ವೈದ್ಯಕೀಯ ಸೌಲಭ್ಯ, ಮನೆಪಾಠ, ನಿತ್ಯ ಬಳಕೆಯ ಅಗತ್ಯ ಸಾಮಗ್ರಿಗಳು ಇತ್ಯಾದಿ ಸೌಲಭ್ಯಗಳನ್ನು ಇಲಾಖೆಯ ವತಿಯಿಂದ ಒದಗಿಸಲಾಗುತ್ತಿದೆ. ಇಲಾಖೆಯ ಕ್ರೀಡಾ ಶಾಲೆ/ನಿಲಯಗಳ ಕ್ರೀಡಾಪಟುಗಳು ರಾಷ್ಟ್ರಮಟ್ಟ ಹಾಗೂ ಅಂತರ್‌ರಾಷ್ಟ್ರ ಮಟ್ಟದ ಪಂದ್ಯಾವಳಿಗಳಲ್ಲಿ ಭಾಗವಹಿಸಿ ಪ್ರಥಮ/ದ್ವಿತೀಯ/ತೃತೀಯ ಸ್ಥಾನಗಳನ್ನು ಪಡೆದವರಿಗೆ ಉತ್ತೇಜನ ನೀಡುವ ಸಲುವಾಗಿ **ನಗದು ಪ್ರೋತ್ಸಾಹಧನ**ವನ್ನು ನೀಡಲಾಗುತ್ತಿದೆ.

- **<u>ಶೈಕ್ಷಣಿಕ ಶುಲ್ಕ ಮರುಪಾವತಿ</u>:**

ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ರಾಜ್ಯದಿಂದ ಪ್ರತಿನಿಧಿಸಿ ಸಾಧನೆ ಮಾಡಿದ ಕ್ರೀಡಾಪಟುಗಳಿಗೆ ಗರಿಷ್ಠ ರೂ 50,000/- (Tuition Fees) ಶೈಕ್ಷಣಿಕ ಶುಲ್ಕ ಮರು ಪಾವತಿ ಮಾಡಲಾಗುತ್ತಿದೆ.

- **<u>ಕ್ರೀಡಾ ಸಾಧಕರಿಗೆ ನಗದು ಪುರಸ್ಕಾರ</u>:**

ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದ ಕ್ರೀಡಾಕೂಟಗಳಲ್ಲಿ ಭಾಗವಹಿಸಿ ವಿಜೇತರಾದ ಕ್ರೀಡಾಪಟುಗಳಿಗೆ ನಗದು ಪುರಸ್ಕಾರವನ್ನು ಈ ಕೆಳಕಂಡಂತೆ ನೀಡಲಾಗುತ್ತಿದೆ.

**(ರೂ ಲಕ್ಷಗಳಲ್ಲಿ)**

| ಕ್ರ. ಸಂ. | ವಿವರ | ಚಿನ್ನ | ಬೆಳ್ಳಿ | ಕಂಚು |
|---|---|---|---|---|
| 1 | ಒಲಿಂಪಿಕ್ಸ್ ಗೇಮ್ಸ್ | 600.00 | 400.00 | 300.00 |
| 2 | ಏಷಿಯನ್ ಗೇಮ್ಸ್ | 35.00 | 25.00 | 15.00 |
| 3 | ಕಾಮನ್ ವೆಲ್ತ್ ಗೇಮ್ಸ್ | 35.00 | 25.00 | 15.00 |
| 4 | ವರ್ಲ್ಡ್ ಕಪ್ /ಚಾಂಪಿಯನ್ ಷಿಪ್ (ಭಾರತ ಸರ್ಕಾರದಿಂದ ಅಂಗೀಕೃತವಾಗಿ ಭಾರತ ತಂಡದ ಭಾಗವಾಗಿ ಪ್ರತಿನಿಧಿಸಿರಬೇಕು) | 5.00 | 3.00 | 2.00 |
| 5 | ನ್ಯಾಷನಲ್ ಗೇಮ್ಸ್ (ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ನಡೆಯುವ ಕ್ರೀಡೆಗಳು) | 5.00 | 3.00 | 2.00 |
| 6 | ನ್ಯಾಷನಲ್ ಚಾಂಪಿಯನ್ ಷಿಪ್ (ಒಲಂಪಿಕ್ ಕ್ರೀಡೆಗಳಿಗೆ ಮಾತ್ರ) | 2.00 | 1.00 | 0.50 |
| 7 | ಜೂನಿಯರ್ ನ್ಯಾಷನಲ್ (ಒಲಂಪಿಕ್ ಕ್ರೀಡೆಗಳಿಗೆ ಮಾತ್ರ) | 0.50 | 0.25 | 0.15 |
| 8 | ಸಬ್ ಜೂನಿಯರ್ ನ್ಯಾಷನಲ್ (ಒಲಂಪಿಕ್ ಕ್ರೀಡೆಗಳಿಗೆ ಮಾತ್ರ) | 0.25 | 0.15 | 0.10 |

- **<u>ಪರಿಶಿಷ್ಟ ಜಾತಿ ಮತ್ತು ಪರಶಿಷ್ಟ ಪಂಗಡದ ಕ್ರೀಡಾಪಟುಗಳಿಗೆ ವಿಶೇಷ ಉತ್ತೇಜನ</u>**:

  ಪರಿಶಿಷ್ಟ ಜಾತಿ ಮತ್ತು ಪಂಗಡದ ಸಾಧಕ ಕ್ರೀಡಾಪಟುಗಳಿಗೆ ವಿಶೇಷ ನಗದು ಪುರಸ್ಕಾರ ವಿತರಿಸಲಾಗುತ್ತಿದೆ.

- **<u>ಕ್ರೀಡಾ ವಿದ್ಯಾರ್ಥಿ ವೇತನ</u>**:

  ರಾಜ್ಯಮಟ್ಟದಲ್ಲಿ ಪದಕ ವಿಜೇತರಾಗಿ ರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿದ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ವಾರ್ಷಿಕ ರೂ 10,000/- ವಿದ್ಯಾರ್ಥಿ ವೇತನ ನೀಡಿ ಪ್ರೋತ್ಸಾಹಿಸಲಾಗುತ್ತಿದೆ.

- **<u>ಕ್ರೀಡಾಕೂಟಗಳ ಆಯೋಜನೆ:</u>**
- **<u>ದಸರಾ ಸಿ.ಎಂ. ಕಪ್ :</u>** ದಸರಾ ಸಿ.ಎಂ. ಕಪ್ ಕ್ರೀಡಾಕೂಟವನ್ನು ಪ್ರತಿ ವರ್ಷ ತಾಲ್ಲೂಕು, ಜಿಲ್ಲೆ ವಿಭಾಗ ಮತ್ತು ರಾಜ್ಯ ಮಟ್ಟದ ಕ್ರೀಡಾಕೂಟವನ್ನು ಮಹಿಳೆಯರಿಗೆ ಮತ್ತು ಪುರುಷರಿಗೆ ಮುಕ್ತ ವಿಭಾಗದಲ್ಲಿ ಆಯೋಜಿಸಲಾಗುತ್ತಿದೆ.
- **<u>ಮಿನಿ ಒಲಂಪಿಕ್ಸ್:</u>** ಯುವ ಕ್ರೀಡಾಪಟುಗಳನ್ನು ಆರಂಭಿಕ ಹಂತದಲ್ಲಿಯೇ ಗುರುತಿಸಿ ಉತ್ತೇಜಿಸಲು ಅನುಕೂಲವಾಗುವಂತೆ 14 ವರ್ಷ ವಯೋಮಾನದೊಳಗಿನ ಬಾಲಕ ಮತ್ತು ಬಾಲಕಿಯರಿಗೆ ಕರ್ನಾಟಕ ಒಲಿಂಪಿಕ್ ಸಂಸ್ಥೆಯ ಸಹಯೋಗದೊಂದಿಗೆ ಮಿನಿ ಒಲಿಂಪಿಕ್ಸ್ ಆಯೋಜಿಸಲಾಗುತ್ತಿದೆ. ದಿನಾಂಕ: 14-11-2024 ರಿಂದ 21-11-2024 ರವರೆಗೆ ಬೆಂಗಳೂರಿನಲ್ಲಿ ಮಿನಿ ಒಲಿಂಪಿಕ್ಸ್-2024 ನ್ನು ಯಶಸ್ವಿಯಾಗಿ ಆಯೋಜಿಸಲಾಗಿದೆ.
- **<u>ಕ್ರೀಡಾ ಸಾಧಕರಿಗೆ ಪ್ರಶಸ್ತಿಗಳು:</u>**
- **<u>ಏಕಲವ್ಯ ಪ್ರಶಸ್ತಿ:</u>** ಏಕಲವ್ಯ ಪ್ರಶಸ್ತಿ ರಾಜ್ಯದ ಅತ್ಯುನ್ನತ ಕ್ರೀಡಾ ಪ್ರಶಸ್ತಿಯಾಗಿದ್ದು, ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ರಾಜ್ಯವನ್ನು ಪ್ರತಿನಿಧಿಸಿ ಸಾಧನೆ ಮಾಡಿದ ಕ್ರೀಡಾಪಟುಗಳಿಗೆ ಏಕಲವ್ಯ ಪ್ರಶಸ್ತಿ ನೀಡಲಾಗುವುದು.
- **<u>ಕರ್ನಾಟಕ ಕ್ರೀಡಾರತ್ನ ಪ್ರಶಸ್ತಿ:</u>** ದೇಸೀ ಗ್ರಾಮೀಣ ಕ್ರೀಡೆಗಳಲ್ಲಿ ವಿಶೇಷ ಸಾಧನೆ ಮಾಡಿದ ರಾಜ್ಯದ ಗ್ರಾಮೀಣ ಕ್ರೀಡಾಪ್ರತಿಭೆಗಳಿಗೆ ಕರ್ನಾಟಕ ಕ್ರೀಡಾರತ್ನ ಪ್ರಶಸ್ತಿ ನೀಡಿ ಗೌರವಿಸಲಾಗುವುದು.
- **<u>ಕ್ರೀಡಾ ಮೂಲಸೌಕರ್ಯಗಳ ಸೃಜನೆ:</u>**

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ವತಿಯಿಂದ ರಾಜ್ಯದಾದ್ಯಂತ ಕ್ರೀಡಾ ಮೂಲಸೌಕರ್ಯಗಳನ್ನು ಒದಗಿಸಲು ಆದ್ಯತೆ ನೀಡಲಾಗುತ್ತಿದೆ. ವಿವರ ಇಂತಿದೆ.

| ಕ್ರ. ಸಂ. | ವಿವರ | ಪೂರ್ಣಗೊಂಡ ಕಾಮಗಾರಿಗಳು | ಪ್ರಗತಿಯಲ್ಲಿರುವ ಕಾಮಗಾರಿಗಳು |
|---|---|---|---|
| 1 | ಜಿಲ್ಲಾ ಕ್ರೀಡಾಂಗಣಗಳು | 29 | 00 |
| 2 | ತಾಲ್ಲೂಕು ಕ್ರೀಡಾಂಗಣಗಳು | 125 | 12 |
| 3 | ಒಳಾಂಗಣ ಕ್ರೀಡಾಂಗಣಗಳು | 60 | 18 |
| 4 | ಈಜುಕೊಳಗಳು | 34 | 07 |
| 5 | ಸಿಂಥೆಟಿಕ್ ಅಥ್ಲೆಟಿಕ್ ಟ್ರ್ಯಾಕ್‌ಗಳು | 20 | 01 |
| 6 | ಸಿಂಥೆಟಿಕ್ ಹಾಕಿ ಟರ್ಫ್‌ಗಳು | 08 | 00 |
| 7 | ಸಿಂಥೆಟಿಕ್ ಫುಟ್ಬಾಲ್ ಟರ್ಫ್ | 01 | 00 |